# ಶೌಚಾಲಯ ಕ್ರಾಂತಿಯ ಹಾದಿಯಲ್ಲಿ...

ಪ್ರತಿಯೊಂದು ಊರಲ್ಲೂ ಹೀಗೆ ಹೆಣ್ಣುಮಕ್ಕಳು ಹಠ ಹಿಡಿದರೆ, ಇಡೀ ರಾಜ್ಯವನ್ನು ಬಯಲುಶೌಚ ಮುಕ್ತಗೊಳಿಸುವುದು ಕಷ್ಟದ ಕೆಲಸವೇನಲ್ಲ.

ಮನೆಯಲ್ಲಿ ಶೌಚಾಲಯ ಕಟ್ಟಲು ಒಪ್ಪದ ಪೋಷಕರ ವಿರುದ್ಧ ಪ್ರತಿಭಟಿಸಿ ಉಪವಾಸ ನಡೆಸಿ, ಒತ್ತಡ ಹೇರಿ ಕೊನೆಗೂ ಯಶಸ್ಸು ಪಡೆದ ಇನ್ನೊಬ್ಬ ಹೆಣ್ಣುಮಗಳ ಸುದ್ದಿ ಕಲಬುರಗಿ ಜಿಲ್ಲೆಯ ಸೇಡಂನಿಂದ ಬಂದಿದೆ. ಸೇಡಂ ತಾಲ್ಲೂಕಿನ ರಿಬ್ಬನಪಲ್ಲಿ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಮಾಧವಿ ಮಲ್ಲೇಶ ಈ ಸಾಧನೆಗೈದ ಹುಡುಗಿ. ಒಂದು ವಾರದಿಂದ ಈಕೆ ಶೌಚಾಲಯ ನಿರ್ಮಿಸಿ ಎಂದು ಹೆತ್ತವರ ಮುಂದೆ ಹಠ ಹಿಡಿದಿದ್ದಳು. ಒಂದು ಹಂತದಲ್ಲಿ ತನ್ನ ಕಿವಿಯೋಲೆ ಮಾರಿಯಾದರೂ ದುಡ್ಡು ತಂದು ಶೌಚಾಲಯ ಕಟ್ಟಿಸಿ ಎಂದು ದುಂಬಾಲು ಬಿದ್ದ ಆಕೆಯ ಮನವಿಗೆ ಸ್ಪಂದಿಸಿರುವ ಹೆತ್ತವರು ಇದೀಗ ಶೌಚಾಲಯ ನಿರ್ಮಾಣ ಆರಂಭಿಸಿದ್ದಾರೆ. ಎರಡು ತಿಂಗಳ ಹಿಂದೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಢಣಾಪುರದಿಂದಲೂ ಇಂತಹ ಘಟನೆ ವರದಿಯಾಗಿತ್ತು. ಆಗ, ಹತ್ತನೇ ತರಗತಿಯ ವಿದ್ಯಾರ್ಥಿನಿ ಮಲ್ಲಮ್ಮ ಸಣ್ಣನಿಂಗಮ್ಮ ತನ್ನ ಪೋಷಕರ ಮೇಲೆ ಒತ್ತಡ ಹೇರಲು ಉಪವಾಸ ಕುಳಿತು ಮನೆಯಲ್ಲಿ ಶೌಚಾಲಯ ಕಟ್ಟಿಸುವಲ್ಲಿ ಯಶಸ್ವಿಯಾಗಿದ್ದಳು. ಮನೆಯಲ್ಲಿ ಹೆಣ್ಣುಮಕ್ಕಳು ಮನಸ್ಸು ಮಾಡಿದರೆ ಯಾವ ಕೆಲಸವೂ ಅಸಾಧ್ಯವಲ್ಲ ಎನ್ನುವುದನ್ನು ಈ ಎರಡು ಪ್ರಕರಣಗಳು ಸೂಚಿಸುತ್ತವೆ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಬಯಲು ಶೌಚಾಲಯದ ಬಳಕೆ ಸಂಪ್ರದಾಯವೆಂಬಂತೆ ನಡೆದುಕೊಂಡು ಬರುತ್ತಿರುವುದು ಸುಳ್ಳಲ್ಲ. ಪ್ರತಿಯೊಂದು ಊರಲ್ಲೂ ಹೀಗೆ ವಿದ್ಯಾರ್ಥಿನಿಯರು ಹಠ ಹಿಡಿದರೆ, ಇಡೀ ರಾಜ್ಯವನ್ನು ಬಯಲುಶೌಚ ಮುಕ್ತಗೊಳಿಸುವುದು ಕಷ್ಟದ ಕೆಲಸವೇನಲ್ಲ. ಮಾಧವಿ ಮಲ್ಲೇಶ ಮನೆಯಲ್ಲೇ ಶೌಚಾಲಯ ನಿರ್ಮಿಸುವ ಹಠ ಹಿಡಿಯಲು ಶಾಲೆಯಲ್ಲಿ ಆದ ಅವಮಾನದ ಭಾವನೆಯೇ ಮುಖ್ಯ ಕಾರಣವಾಯಿತು. ಶಾಲೆಯಲ್ಲಿ ಅಧ್ಯಾಪಕರು ಪದೇ ಪದೇ 'ಯಾರ ಮನೆಯಲ್ಲಿ ಶೌಚಾಲಯ ಇಲ್ಲ?' ಎಂದು ಕೇಳುತ್ತಿದ್ದುದು ಮಾಧವಿಗೆ ಅವಮಾನ ಎನ್ನಿಸಿದ್ದು, ಅದೇ ಆಕೆಯ ಹೋರಾಟದ ಮನೋಭಾವಕ್ಕೆ ಕಾರಣವಾಯಿತು. ಗಂಗಾವತಿ ತಾಲ್ಲೂಕಿನಲ್ಲಿ ಶ್ರೀರಾಮನಗರ ಗ್ರಾಮ ಪಂಚಾಯ್ತಿಯ ಅಧ್ಯಕ್ಷ ಶ್ರೀನಿವಾಸ ಕರಟೂರಿ ಅವರು ಬಯಲು ಶೌಚಕ್ಕೆ ಹೋಗುವವರಿಗೆ ಕೈಮುಗಿದು 'ದಯವಿಟ್ಟು ಬಯಲಿಗೆ ಹೋಗಬೇಡಿ, ಮನೆಯಲ್ಲೇ ಶೌಚಾಲಯ ಕಟ್ಟಿಸಿಕೊಳ್ಳಿ' ಎಂದು ಮನವಿ ಮಾಡುತ್ತಿದ್ದುದು ಒಂದು ಚಳವಳಿಯಂತೆ ನಡೆದು ಆ ಗ್ರಾಮದಲ್ಲೂ ನೈರ್ಮಲ್ಯ ಚಳವಳಿಗೆ ಕಾರಣವಾಗಿದೆ. ಇಂತಹ ಪ್ರಯತ್ನಗಳು ಬಯಲೇ ಶೌಚಾಲಯ ಆಗಿರುವ ಎಲ್ಲ ಹಳ್ಳಿಗಳಲ್ಲೂ ನಡೆಯಬೇಕು. ಹೋರಾಟ ಎನ್ನುವುದು ಸದಾ ಗುಂಪುಗೂಡಿ ನಡೆಯುವುದಲ್ಲ; ವೈಯಕ್ತಿಕ ಮಟ್ಟದಲ್ಲೂ ನಡೆಯುತ್ತದೆ ಎನ್ನುವುದಕ್ಕೆ ಈ ಘಟನೆಗಳು ಸಾಕ್ಷಿಯಾಗಿವೆ.

ಜನರಿಗೆ ಸೂಕ್ತ ತಿಳಿವಳಿಕೆ ಮೂಡದೆ ರಾಜ್ಯದ ಎಲ್ಲ ಗ್ರಾಮಗಳನ್ನು ಬಯಲು ಶೌಚಾಲಯ ಮುಕ್ತಗೊಳಿಸುವುದು ಕಷ್ಟ. 2015ರ ವೇಳೆಗೆ ರಾಜ್ಯದಲ್ಲಿ ಬಯಲು ಶೌಚಾಲಯವಿಲ್ಲದ ಗ್ರಾಮ ಪಂಚಾಯ್ತಿಗಳ ಸಂಖ್ಯೆ ಇದ್ದದ್ದೇ ಶೇಕಡಾ 4.7ರಷ್ಟು. ಅಂದರೆ ಸವೆಸಬೇಕಾದ ದಾರಿ ಸಾಕಷ್ಟು ದೂರವಿದೆ. ಇದನ್ನು ಮನಗಂಡೇ 'ಸ್ವಚ್ಛ ಭಾರತ್ ಅಭಿಯಾನ'ದಡಿ 2019ರ ವೇಳೆಗೆ ರಾಜ್ಯದಲ್ಲಿ 40 ಲಕ್ಷ ಹೊಸ ಶೌಚಾಲಯಗಳನ್ನು ನಿರ್ಮಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಇದರಲ್ಲಿ 2016–17ರ ಅವಧಿಯಲ್ಲಿ 10.3 ಲಕ್ಷ ಶೌಚಾಲಯಗಳು ನಿರ್ಮಾಣವಾಗಬೇಕು. ಆದರೆ ಈಗಿನ ಪ್ರಗತಿ ನೋಡಿದರೆ ಈ ಗುರಿ ಸಾಧಿಸುವುದು ಕಷ್ಟ ಎನ್ನಿಸುತ್ತದೆ.

ಗ್ರಾಮಗಳಲ್ಲಿ ಶೌಚಾಲಯ ನಿರ್ಮಿಸಲು ಪಂಚಾಯ್ತಿ ವತಿಯಿಂದ ಸಬ್ಸಿಡಿ ನೀಡುವ ಯೋಜನೆಯ ನಿಧಾನಗತಿಗೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಅಸಡ್ಡೆಯೂ ಕಾರಣ ಎನ್ನುವ ದೂರುಗಳಿವೆ. ಈ ಯೋಜನೆಯಲ್ಲಿ ಕೆಲಸ ಮಾಡಿರುವ ಸ್ವಯಂಸೇವಕರ ಪ್ರಕಾರ, ಶೇಕಡಾ 10ರಷ್ಟು ಹಣದ ದುರುಪಯೋಗ ಆಗುತ್ತಿದೆ. ಮುಖ್ಯವಾಗಿ 2012ರ ಮೂಲ ಸಮೀಕ್ಷೆಯಲ್ಲೇ ಶೌಚಾಲಯ ಇಲ್ಲದ ಮನೆಗಳ ಲೆಕ್ಕಾಚಾರ ತಪ್ಪಾಗಿ ನಮೂದಾಗಿದ್ದು, ಎಷ್ಟೋ ಕಡೆ ಶೌಚಾಲಯ ಇರುವ ಮನೆಗಳವರನ್ನೇ ಫಲಾನುಭವಿಗಳಾಗಿ ಸೇರಿಸಿ ಪಂಚಾಯ್ತಿ ಸದಸ್ಯರು ಮತ್ತು ಪಿಡಿಒ ಗಳು ಹಣ ಹಂಚಿಕೊಳ್ಳುತ್ತಿರುವ ವರದಿಗಳಿವೆ. ಶೌಚಾಲಯ ಪೂರ್ತಿಯಾಗಿ ನಿರ್ಮಾಣವಾದ ಬಳಿಕ ಸಬ್ಸಿಡಿ ಹಣ ಬಿಡುಗಡೆ ಮಾಡುವುದರಿಂದ ಹಲವೆಡೆ ಅರ್ಹ ಬಡ ಕುಟುಂಬಗಳು ಅರ್ಧಕ್ಕೆ ಕೆಲಸ ನಿಲ್ಲಿಸಿರುವ ಪ್ರಕರಣಗಳೂ ಇವೆ. ಯೋಜನೆಯ ಯಶಸ್ವೀ ಜಾರಿಗೆ ಸರ್ಕಾರ ಇನ್ನಷ್ಟು ಕಣ್ಗಾವಲು ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎನ್ನುವುದು ಸ್ಪಷ್ಟ.

■ ಬಿ.ಎಂ. ಹನೀಫ್

